ಶ್ರೀ ಎಂ. ಬಿ. ರಾಮಸ್ವಾಮಿ —ಉತ್ತರದಲ್ಲಿ ಇಲ್ಲ ಎಂದು ಇದೆ. ಪಿ.ಡಬ್ಯು.ಡಿ. ಇಲಾಖೆಯವರಿಂದ ಇದನ್ನು ಅಕ್ಯುಪೈ ಮಾಡಿ ಎಷ್ಟು ವರ್ಷಗಳಾಗಿವೆ ?

† ಶ್ರೀ ಎಸ್. ಬಿ. ನಗರಾಳ್.—೧೯೬೯ ರಿಂದೀಚೆಗೆ ಇದನ್ನು ಅಕ್ಯುಪೈ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಬಿ ರಾಮಸ್ವಾಮಿ —ಸುಮಾರು ೩೫ ವರ್ಷಗಳಿಂದಲೂ ಇದರ ಬ್ರಿಜ್ ರಿಪೇರಿಯಾಗದೆ ಹಾಗೇ ಇದೆ. ಇದು ಹರಿಜನರ ಜಮೀನು ಎಂದು ಅವರಿಗೆ ಕೊಡಲಾಗಿತ್ತು. ಇದನ್ನು ಪಿ.ಡಬ್ಯು.ಡಿ. ಯವರು ಅಕ್ವೈರ್ ಮಾಡಿಕೊಂಡಿದ್ದಾರೆ. ಇಪ್ಪತ್ತು ವರ್ಷಗಳಿಂದಲೂ ಹರಿಜನರಿಂದ ಅರ್ಜಿಗಳು ಬರುತ್ತಲೇ ಇವೆ. ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಮುತ್ತು ಇವರಿಗೆ ಸೂಕ್ತವಾದ ಕಾಂಪೆನ್ಸೇಷನ್ ಕೊಡುತ್ತಿರಾ ?

ಶ್ರೀ ಎಸ್. ಬಿ. ನಗರಾಳ್.—ಕಾಂಪೆನ್ಸೆಷನ್ ಕೊಡುವವರು ರೆವಿನ್ಯೂ ಇಲಾಖೆಯವರು ಏಕೆಂದರೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡುವವರು ಅವರು. ಆದರೆ ಇದರ ಬಗ್ಗೆ ರೂಲ್ಸ್ ಪ್ರಕಾರ ಎಷ್ಟು ಕಾಂಪೆನ್ಸೇಷನ್ ಕೊಡಬೇಕೆಂದು ರೆವೆನ್ಯೂ ಇಲಾಖೆಯವರು ತಿಳಿಸಿದರೆ ಅದನ್ನು ಪಿ.ಡಬ್ಯು.ಡಿ. ಇಲಾಖೆಯ ಮೂಲಕ ಕೊಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಪಿ. ಡಬ್ಯು. ಡಿ. ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ರೆವೆನ್ಯೂ ಇಲಾಖೆಯವರು ಪಿ.ಡಬ್ಯು.ಡಿ. ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ. ಹೀಗೆ ಒಬ್ಬರಿಗೊಬ್ಬರಿಗೆ ಸಂಬಂಧವಿಲ್ಲದಂತೆ ಒಂದು ಇಲಾಖೆಯವರು ಇನ್ನೊಂದು ಇಲಾಖೆ ಮೇಲೆ ಶಕಾಯಿಸುತ್ತಿದ್ದಾರೆ ೨೦-೩೫ ವರ್ಷಗಳಿಂದಲೂ ಇದನ್ನು ಯಾರು ಕೊಡುತ್ತಾರೆ ಎನ್ನುವುದನ್ನು ಇನ್ನೂ ಹೇಳಲಿಲ್ಲ. You say that the land was under occupatio o PWD and land acquisition proceedings have been initiated. ಇಲ್ಲಿ ಭೂಮಿ ಕಳೆದುಕೊಂಡಿರುವ ಹರಿಜನ ರೈತರಿಗೆ ಇನ್ನೂ ಯಾವ ಪರಿಹಾರವನ್ನೂ ಕೊಡಲಿಲ್ಲ. ಬೇಗನೆ ಇವರಿಗೆ ಬೇರೆ ಕಡೆ ಭೂಮಿ ಕೊಡುತ್ತಿರಾ ? ಈಗ ಆದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಅದಷ್ಟು ಜಾಗ್ರತೆಯಾಗಿ ಹರಿಜನರಿಗೆ ಕಾಂಪೆನ್ಸೇಷನ್ ಕೊಡುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್. ಬಿ. ನಗರಾಳ್ —ಬೇರೆ ಜಮೀನನ್ನು ಕೊಡುವುದರ ಬಗ್ಗೆ ರೆವೆನ್ಯೂ ಇಲಾಖೆಯವರ ಅರ್ಜಿ ಬಂದಾಗ ಅದನ್ನು ಯೋಚನೆ ಮಾಡುತ್ತಾರೆ. ಪಿ ಡಬ್ಯು.ಡಿ.ಯವರು ಬೇರೆ ಜಮೀನ ಕೊಡುತ್ತಿಲ್ಲ.

Utilisation of Amount of Unclaimed Lottery Prizes

736. SRI K. R. SRINIVASULU NAIDU (Shanthinagar).—
Will the Minister for Finance and Housing be pleased to state.—

(*a*) the purpose for which the Lottery Scheme was started in Karnataka;

(*b*) the number of draws conducted from the inception of the Scheme (yearwise),

(*c*) the gross receipt from the sale of Lottery Tickets, the expenditure incurred and the balance from the inception of the Scheme (Yearwise including cost of establishment);

(*d*) the amount of prizes unclaimed and how such amount has been utilised ?

SRI M. Y. GHORPADE (Minister for Finance and Housing).—

(*a*) The scheme was started with a view to argument the resources of the State and to meet the increasing expenditure on development programmes.

(*b*) —

Year	No. of draws held
1969-70	... 2
1970-71	... 12
1971-72	... 18
1972-73	... 18
1973-74	... 14
1974-75	... 10
Total	... 74

(*c* —

Year	Gross Receipt	Expr. including Estt.	Balance (Net Income)
		(Rs. in lakhs)	
1969-70	207	95	112
1970-71	686	470	216
1971-72	558	359	199
1972-73	357	230	127
1973-74	228	156	72
1974-75 (upto Feb. 75) provisional	187	144	43
Total	2,223	1,454	769

(*d*) Rs. 145 lakhs upto February 1975. This amount is not utilised for any specific purpose. It remains in the consolidated fund of the State as a part of income from the scheme.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—೧೯೭೦-೭೧ನೇ ಸಾಲಿನಲ್ಲಿ ಲಾಟರಿಯಿಂದ ಬಂದ ಆದಾಯ ಸುಮಾರು ೬೮೬ ಲಕ್ಷ ರೂಪಾಯಿ ಇತ್ತು. ಈಗ ಎಂದರೆ ೧೯೭೫ನೇ ಸಾಲಿನಲ್ಲಿ ಆದಾಯ ಬಂದಿರುವುದು ಕೇವಲ ೧೮೭ ಲಕ್ಷ ರೂಪಾಯಿ ಮಾತ್ರ. ಇದರಿಂದ ನೋಡಿದರೆ ಡ್ರಾ ನಡೆದಿರುವುದೂ ಕಡಿಮೆಯಾಗಿದೆ ಮತ್ತು ಆದಾಯ ಕೂಡ ಬರಬರುತ್ತಾ ಕಮ್ಮಿಯಾಗಿದೆ. ಇದಕ್ಕೆ ಮುಖ್ಯ ಕಾರಣಗಳೇನು?

† ಶ್ರೀ ಎಂ. ವೈ. ಘೋರ್ಪಡೆ.—ಲಾಟರಿ ಸ್ಕೀಂ ಮೊದಲು ಆದಾಯ ಯಾವ ರೀತಿ ಇತ್ತೋ ಆ ರೀತಿ ಇಲ್ಲದೆ ಆದಾಯ ಕಡಿಮೆಯಾಗಿದೆ. ಇದು ಎಲ್ಲ ರಾಜ್ಯಗಳಲ್ಲೂ ಆಗುತ್ತಿದೆ. ಇದಕ್ಕೆ ಕಾರಣ ಸೆಂಟ್ರಲ್ ಟ್ಯಾಕ್ಸೇಷನ್ ಪಾಲಿಸಿ ಕೂಡ ಮತ್ತು ಕೊಳ್ಳುವವರೂ ಕೂಡ ಕಡಿಮೆಯಾಗಿದ್ದಾರೆ. ಇವೆರಡು ಮುಖ್ಯ ಕಾರಣಗಳು ಇದಕ್ಕೆ ಇರುವುದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ಲಾಟರಿಯಿಂದ ಬರುವ ಆದಾಯವನ್ನು ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಉಪಯೋಗ ಮಾಡುತ್ತೇವೆಂದು ಇದೆ. ಆದರೆ ಇದನ್ನು ಇಂತಹ ಒಂದು ಬಾಬಿಗೇ ಉಪಯೋಗ ಮಾಡಬೇಕೆಂದು ನಿರ್ದಿಷ್ಟವಾಗಿ ಮಾಡಲಾಗುವುದಿಲ್ಲವೇ ? ಮತ್ತು ಸರ್ಕಾರದ ಆರೋಗ್ಯ ಇಲಾಖೆಗೆ ಹಣ ಸಾಲದೂ ಔಷಧಿಗಳಿಲ್ಲ ಎಂದು ಹೇಳುತ್ತಿರುವುದರಿಂದ ಇದರಿಂದ ಬರುವ ವರಮಾನವನ್ನು ಬರೀ ಆರೋಗ್ಯ ಇಲಾಖೆಗೇ ಮೀಸಲಾಗಿಡುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವೈ ಘೋರ್ಪಡೆ.—ಯಾವುದೇ ಹಣ ಬರಲಿ ಅದು ಸರ್ಕಾರದ ಬೊಕ್ಕಸಕ್ಕೇ ಬರುತ್ತದೆ. ಯಾವ ಯಾವ ಬಾಬುಗಳಿಗೆ ಸರ್ಕಾರ ಖರ್ಚು ಮಾಡಬೇಕೆನ್ನುವುದಕ್ಕೆ ಅದಕ್ಕೆ ತಕ್ಕ ಪ್ರಯಾರಿಟಿಗಳಿರುತ್ತವೆ ಇದಕ್ಕೋಸ್ಕರ ಪ್ರತ್ಯೇಕವಾಗಿ ಇದರ ಆದಾಯವನ್ನು ಇಡಬೇಕೆಂದರೆ ಆ ರೀತಿ ಮಾಡಲು ಬರುವುದಿಲ್ಲ ಮತ್ತು ಹಾಗೆ ಮಾಡುವ ಅವಶ್ಯಕತೆಯೂ ಇಲ್ಲ. ಲಾಟರಿ ಹಣವನ್ನು ಪ್ರತ್ಯೇಕವಾಗಿ ಪ್ರತ್ಯೇಕ ಫಂಡ್ ಆಗಿ ಇಡಬೇಕೆಂದು ಹೇಳುವುದು ಕ್ರಮಬದ್ಧವಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಲಾಟರಿ ಸ್ಕೀಂ ಶುರು ಮಾಡಿದ್ದು ೧೯೬೯-೭೦ರಲ್ಲಿ ಮತ್ತು ಆಗ ಬಂದ ಆದಾಯ ಸುಮಾರು ೨೦೭ ಲಕ್ಷ ರೂಪಾಯಿ ಎಂದು ಇದೆ. ಇದೇ ಆದಾಯ ೧೯೭೫ರಲ್ಲಿ ನೋಡಿದಾಗ ೧೮೭ ಲಕ್ಷ ರೂಪಾಯಿಗಳು ಮತ್ತು ಇದರ ಸಿಬ್ಬಂದಿಗೆ ಖರ್ಚಾಗಿರುವುದು ೧೪ಳ ಲಕ್ಷ ರೂಪಾಯಿಗಳು. ಆದರೆ ಉಳಿದ ಆದಾಯ ಬಂದಿರುವುದು ಬರೀ ೪೫ ಲಕ್ಷ ರೂಪಾಯಿ ಮಾತ್ರ. ಎಂದರೆ ಶೇಕಡ ೨೫ಕ್ಕಿಂತ ಕಡಿಮೆ ವರಮಾನ ಕೂಡ ಸರ್ಕಾರಕ್ಕೆ ಬಂದಿಲ್ಲ. ಇದರಿಂದ ಬಂದಿರುವ ವರಮಾನ ಬರೀ ಬಡವರಿಂದಲೇ ಎಂದು ಗೊತ್ತಾಗುತ್ತದೆ. ಹೀಗೆ ಬಡವರನ್ನು ಶೋಷಣೆ ಮಾಡಿ ೧೮೭ ಲಕ್ಷ ರೂಪಾಯಿ ಆದಾಯ ಪಡೆಯಲಾಗಿದೆಯಲ್ಲವೇ ? ರೇಸುಗಳನ್ನು ಪಜಾ ಮಾಡಬೇಕೆಂದು ಕೇಳಿದಾಗ ಅದು ಶ್ರೀಮಂತರಿಗೆ ಸೇರಿದ್ದು ಅದರಿಂದ ಹೆಚ್ಚು ಆದಾಯ ಬರುತ್ತೆ ಅದನ್ನು ರದ್ದು ಮಾಡುವುದು ಬೇಡ ಎಂದರು. ಈಗ ಬರೀ ೧೪ಳ ಲಕ್ಷ ರೂಪಾಯಿಗಳಷ್ಟು ಸಿಬ್ಬಂದಿಗಾಗಿಯೇ ವೆಚ್ಚ ಮಾಡುವಂತಾದರೆ ಸರ್ಕಾರಕ್ಕೆ ಹೆಚ್ಚು ವರಮಾನ ಬಂದಂತಾಗಲಿಲ್ಲ ಆದ್ದರಿಂದ ಇದನ್ನು ರದ್ದು ಮಾಡುವುದು ಸೂಕ್ತವಾಗಿದೆಯಲ್ಲವೇ ? ಮತ್ತು ಇದರಿಂದ ಬಡವರ ಶೋಷಣೆಯೂ ತಪ್ಪುವುದಲ್ಲವೇ ?

SRI M Y. GHORPADE.—Madam Speaker, as I have said on various occasions, Government will consider at the appropriate time whether continuance of lottery schemes is worthwhile because, it is becoming less and less attractive. So far as betting is concerned, that is one of the organised avenues o betting. Even if organised avenues of betting are abolished, some people who are prone to betting—whether rich or poor, they do bet on their own. And, therefore, based on the assumption that some form of betting will go on and some people will ruin themselves, in spite of anything that anybody else will do, it may not be anti-social to provide some form of organised avenue of betting, where there is some semblance of order. I am not one of those who wants to encourage gambling but we will have to take into account all aspects before abolishing. Lottery is becoming less and less popular. Government will take suitable decesion abount it at the appropriate time.

ಶ್ರೀ ಕೆ. ಹೆಚ್. ಹನುಮೇಗೌಡ.—ಲಾಟರಿ ಡ್ರಾಗಳನ್ನು ಮೊದಲು ಬರೀ ಬೆಂಗಳೂರಲ್ಲಿ ಮಾಡುತ್ತಿದ್ದರು. ಈಚೆಗೆ ಇದನ್ನು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಡ್ರಾ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ.—ರಾಜ್ಯದ ಎಲ್ಲಾ ಭಾಗಗಳಲ್ಲೂ ಡ್ರಾಗಳನ್ನು ನಡೆಸುವುದಕ್ಕೆ ಅವಕಾಶ ಇದೆ. ಪ್ರತಿಯೊಂದು ಡ್ರಾವನ್ನೂ ಬೆಂಗಳೂರಿನಲ್ಲೇ ಮಾಡಬೇಕೆಂದೇನೂ ಇಲ್ಲ ಬೇರೆ ಕಡೆಗಳಲ್ಲೂ ನಮ್ಮ ರಾಜ್ಯದಲ್ಲಿ ನಡೆಸಬಹುದು ಮತ್ತು ಇದನ್ನು ಹೆಚ್ಚು ಆಕರ್ಷಕವಾಗಿ ಮಾಡಬೇಕೆಂದು ಈಚೆಗೆ ಪ್ರೈಸ್ ವಾಲ್ಯೂಗಳನ್ನೂ ಹೆಚ್ಚು ಮಾಡಲಾಗಿದೆ. ಇದರ ಉದ್ದೇಶ ಜನರು ಇದರಲ್ಲಿ ಹೆಚ್ಚು ಆಸಕ್ತಿ ತೋರಿಸಲಿ ಎಂದು.

9-30 A.M.

ಶ್ರೀ ಕೆ. ಆರ್. ಶ್ರೀನಿವಾಸಂಲು ನಾಯಿಡು.—ತಮ್ಮ ಉತ್ತರದಲ್ಲಿ ನನ್ನ (ಈ) ಪ್ರಶ್ನೆಗೆ ಉತ್ತರ ವಾಗಿ ೧೪೫ ಲಕ್ಷ ರೂಪಾಯಿಗಳೆಂದು ಹೇಳಿದೆ. ಅದನ್ನು ಕನ್‌ಸಾಲಿಡೇಟೆಡ್ ಫಂಡಿಗೆ ಹಾಕಿದ್ದೇವೆ ಎಂಬುದಾಗಿ ಹೇಳಿದ್ದೀರಿ. ಅದನ್ನು ರಿಜರ್ವ್‌ಫಂಡ್ ಎಂಬುದಾಗಿ ನಾನು ತಿಳಿದಿದ್ದೆ. ಅನೇಕ ಸಂದರ್ಭ ಗಳಲ್ಲಿ ಇಕಾನಮಿ ಮೆಜರ್ಸ್‌ನಿಂದ ಪಾಸಿಟಿ ಆಫ್ ಫಂಡ್ಸ್ ಸಲುವಾಗಿ ಎಮರ್ಜೆನ್ಸಿಗೋಸ್ಕರ ಎಷ್ಟು ಹಣ ವನ್ನು ರಿಜರ್ವ್ ಫಂಡಿನಲ್ಲಿಟ್ಟಿದ್ದೀರಾ? ಅದರ ಬಗ್ಗೆ ವಿವರಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರು ಕನ್‌ಸಾಲಿಡೇಟೆಡ್ ಫಂಡನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಅದು ಸ್ಪೆಷಲ್ ರಿಜರ್ವ್ ಫಂಡ್ ಅಲ್ಲ. ಸಾಮಾನ್ಯವಾಗಿ ಸರ್ಕಾರಕ್ಕೆ ಸೇರುವಂಥ ಹಣವೆಲ್ಲಾ ಕನ್‌ಸಾಲಿಡೇಟೆಡ್ ಫಂಡಿಗೇ ಸೇರುತ್ತದೆ.

Acquisition of Land for Bus Stand at Gurmitkal Town

891. SRI MALLIKARJUNA KHARGE (Gurmitakal).—Will the Minister for Revenue be pleased to state.—

(*a*) whether the Government has started acquisition proceeding to acquire land for construction of Bus Stand by K. S. R. T C. at Gurmitkal Town of Yadgir Taluk ;

(*b*) if so, the date on which the proceedings were started and when the land is expected to be acquired ;

(*c*) the reasons for delay in acquiring the land ?

SRI N. HUICHAMASTHY GOWDA (Minister for Revenue).—

(*a*) Yes.

(*b*) The acquisition proceedings commenced with the preliminary notification under Section 4 (1) of L.A. Act published on 21-2-1974.

The acquisition will be completed as early as procedural requirements permit.

(*c*) Procedural delay.

SRI MALLIKARJUNA KHARGE.—You have said in reply to (b) that the acquisition proceedings commenced with the preliminary notification under Section 4(1) of L.A, Act published on 21-2-1974. May I know when the Government received the proposal from the Assistant Commissioner to publish this notification and what he means by 'Procedural delay' in respect of completing the acquisition proceedings ?

† ಶ್ರೀ ಎನ್. ಹುಚ್ಚಮಾಸ್ತಿಗೌಡ — ಅದು ಅಸಿಸ್ಟೆಂಟ್ ಕಮಿಷನರ್ ಅವರಿಗೆ ಬರುವುದಕ್ಕೆ ಮುಂಚಿತವಾಗಿ ಯಾರು ಆಕ್ಷೇಪಣೆ ಮಾಡಿ ಇರುತ್ತಾರೋ ತಹಸೀಲ್ದಾರರು ಅವರಿಗೆ ಕಳುಹಿಸಿಕೊಡ ಬೇಕಾಗುತ್ತದೆ. ಅವರ ಅಭಿಪ್ರಾಯ ಹಾಗೂ ಅವರ ನಿರ್ಣಯವನ್ನು ಪಡೆದು ಅದು ಸರಿಯಾಗಿದೆ, ಇಲ್ಲ ಎಂದು ತಿಳಿದು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿದೆ. ಆದಕ್ಕೆ ಇಷ್ಟೇ ದಿವಸ ನೋಟೀಸ್ ಕೊಡ ಬೇಕೆಂದಿದೆ. ಅದಾದಮೇಲೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಕಳುಹಿಸಿಕೊಡುತ್ತಾರೆ. ಅದನ್ನು ಯಾವತ್ತು ಕಳುಹಿಸಿಕೊಟ್ಟಿದ್ದಾರೆಂಬ ಬಗ್ಗೆ ತಾರೀಖು ನನ್ನಲಿಲ್ಲ. ಪ್ರಿಲಿಮಿನರಿ ನೋಟಿಫಿಕೇಷನ್ ಆಗಿರತಕ್ಕ ತಾರೀಖಿನ್ನು ಈಗ ಕೊಟ್ಟಿದ್ದೇವೆ.